**<u>ದಿನಾಂಕಃ 05.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಆರೋಪಿಯ ಪರ ಶ್ರೀ ಎಂ.ಎ.ಎನ್. ವಕೀಲರಿಂದಃ</u>**

11. ಘಟನೆ ನಡೆದ ಒಂದು ತಿಂಗಳ ನಂತರ ನಾನು ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ಅದೇ ದಿನ ನಾನು ದೂರು ನೀಡಲು ಹೋಗಿದ್ದೆ, ಆದರೆ ಪೊಲೀಸರು ಯಾವುದೇ ದೂರನ್ನು ಸ್ವೀಕರಿಸಿರುವುದಿಲ್ಲ. ಸದರಿ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಪೊಲೀಸರು ನಾನು ಹೇಳಿದ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ. ಆರೋಪಿತರು ನನಗೆ ವಿಷ ಕುಡಿಸಿದ್ದಕ್ಕೆ ನಾನು ಆಸ್ಪತ್ರೆಗೆ ದಾಖಲಾಗಿದ್ದೆ ಎಂದು ನಾನು ಪೊಲೀಸರ ಮುಂದೆ ಹೇಳಿದರೂ ಕೂಡ ಅವರು ಅದನ್ನು ಬರೆದುಕೊಂಡಿರುವುದಿಲ್ಲ ಎಂದು ಸಾಕ್ಷಿ ಸ್ವತಃ ಹೇಳಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಳ್ಳದೇ ಇದ್ದುದ್ದರಿಂದ ನಾನು ಮೇಲಾಧಿಕಾರಿಗಳಿಗೆ ಯಾವುದೇ ದೂರು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಘಟನೆ ಆದ ಒಂದು ತಿಂಗಳ ನಂತರ ನಾನು ಡಿವೈಎಸ್ಪಿರವರ ಮುಖಾಂತರ ಆರೋಪಿಗಳ ವಿರುದ್ಧ ದೂರು ನೀಡಿರುತ್ತೇನೆ. ನನ್ನ ದೂರಿನಲ್ಲಾಗಲಿ ಅಥವಾ ನನ್ನ ಹೇಳಿಕೆಯಲ್ಲಾಗಲಿ ಆರೋಪಿತರು ನನಗೆ ವಿಷ ಕುಡಿಸಿರುತ್ತಾರೆ ಹಾಗೂ ಜಾತಿ ನಿಂದನೆ ಮಾಡಿರುತ್ತಾರೆ ಎಂಬುದರ ಬಗ್ಗೆ ನಾನು ಹೇಳಿಲ್ಲ. ಈ ವಿಷಯವನ್ನು ಸೃಷ್ಟಿ ಮಾಡಿಕೊಂಡು ಈ ದಿನ ನ್ಯಾಯಾಲಯದ ಮುಂದೆ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳುವ ದಿನ ನನ್ನ ಮಕ್ಕಳು ನನ್ನ ತಾಯಿ ಮನೆಗೆ ಹೋಗಿದ್ದು ನಾನು ಮನೆಯಲ್ಲಿ ಒಬ್ಬಳೆ ಇದ್ದೆ. ನಾನು ಆರೋಪಿಗಳ ವಿರುದ್ಧ ಸುಳು ಕಥೆ ಕಟ್ಟಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನ್ಯಾಯಾಲಯದಿಂದ ಸಮನ್ಸ ಪಡೆದ ನಂತರವೇ ಹುಣಸೂರಿಗೆ ಬಂದಿದ್ದು ಅದಕ್ಕೂ ಮೊದಲು ಹುಣಸೂರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಆರೋಪಿತರಿಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ದೂರು ನೀಡುವ ಸಮಯದಲ್ಲಿ ಠಾಣೆಯಲ್ಲಿ ನನ್ನ ಕೆಲವೊಂದು ಸಹಿಗಳನ್ನು ಪಡೆದಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಸ್ಥಳಕ್ಕೆ ಬಂದು ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

**(ಶಿರಿನ ಜಾವೀದ್ ಅನ್ಸಾರಿ)**
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.